ಹಣ್ಣನ್ನು ಹೋಳುಗಳಾಗಿ ಕತ್ತರಿಸುವಂತೆ ಮನುಷ್ಯನನ್ನು ತುಂಡು ತುಂಡಾಗಿ ಕತ್ತರಿಸಬಹುದೆ? ಹುಳುವೊಂದನ್ನು ಕಾಲಿನಲ್ಲಿ ಹೊಸಕಿ ಹಾಕಿದಂತೆ ಜೊತೆಯಲ್ಲಿ ಬದುಕುತ್ತಿರುವ ಜೀವವನ್ನು ಇಲ್ಲವಾಗಿಸಬಹುದೆ? ಕಲ್ಪಿಸಿಕೊಳ್ಳಲಿಕ್ಕೂ ಕಷ್ಟವಾದ ಈ ಸಾಧ್ಯತೆಗಳೆಲ್ಲ ಈಗ ನಮ್ಮ ನಡುವೆ ಘಟಿಸುತ್ತಿವೆ. ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಸುದ್ದಿಯಾದ ಕೆಲವು ಉದಾಹರಣೆಗಳನ್ನು ನೋಡಿ:

- ದೆಹಲಿಯಲ್ಲಿ ನಡೆದ ಘಟನೆಯೊಂದರಲ್ಲಿ ಶ್ರದ್ಧಾ ವಾಲ್ಕರ್ ಎನ್ನುವ ಯುವತಿಯನ್ನು ಆಕೆಯೊಂದಿಗೆ ‘ಸಹಜೀವನ’ ನಡೆಸುತ್ತಿದ್ದ ಸಂಗಾತಿಯೇ ಕೊಂದು, ಮೃತ ದೇಹವನ್ನು ಮೂವತ್ತೈದು ತುಣುಕುಗಳಾಗಿ ಕತ್ತರಿಸಿ, ರಾಜಧಾನಿಯ ಬೇರೆ ಬೇರೆ ಭಾಗಗಳಲ್ಲಿ ಎಸೆದಿದ್ದ.
- ಉತ್ತರ ಪ್ರದೇಶದ ಬಾವಿಯೊಂದರಲ್ಲಿ ಯುವತಿಯೊಬ್ಬಳ ದೇಹದ ನಾಲ್ಕು ತುಣುಕುಗಳು ದೊರೆತಿದ್ದವು.
- ಉತ್ತರ ಪ್ರದೇಶದ ಮಥುರಾ ಜಿಲ್ಲೆಯ ಯಮುನಾ ಎಕ್ಸ್‌ಪ್ರೆಸ್‌ವೇ ಬಳಿ ತರುಣಿಯೊಬ್ಬಳ ಮೃತದೇಹ ಬ್ಯಾಗ್‌ನಲ್ಲಿ ಪತ್ತೆಯಾಗಿತ್ತು.
- ಅನ್ಯ ಜಾತಿಯ ಯುವಕನನ್ನು ಪ್ರೇಮಿಸಿದ ಮಗಳನ್ನು ತಾಯಿಯೇ ಕೊಂದಿರುವ ಘಟನೆ ತಮಿಳುನಾಡಿನಿಂದ ವರದಿಯಾಗಿತ್ತು.
- ಹುಬ್ಬಳ್ಳಿಯಿಂದ ಇತ್ತೀಚೆಗೆ ವರದಿಯಾಗಿರುವ ಪ್ರಕರಣದಲ್ಲಿ ನತದೃಷ್ಟ ತರುಣಿಯನ್ನು ಕೊಲೆಗಾರ 14 ಬಾರಿ ಚುಚ್ಚಿ ಕೊಂದಿದ್ದಾನೆ. ಮತ್ತೊಬ್ಬ ತರುಣಿಯೂ ಇರಿತಕ್ಕೊಳಗಾಗಿ ಸಾವಿಗೀಡಾದ ಘಟನೆ ಹುಬ್ಬಳ್ಳಿಯಿಂದಲೇ ವರದಿಯಾಗಿದೆ.
- ಕೊಡಗು ಜಿಲ್ಲೆಯ ಸೋಮವಾರಪೇಟೆಯ ಸೂರ್ಲಬ್ಬಿಯಲ್ಲಿ ಕೊಲೆಗೀಡಾದ ಹುಡುಗಿಯ ತಲೆಯನ್ನು ಕತ್ತರಿಸಿ, ರುಂಡವನ್ನು ಕಾಡಿನಲ್ಲಿ ಅಡಗಿಸಿಡಲಾಗಿತ್ತು.
- ನಿವೃತ್ತ ಐಜಿ–ಡಿಜಿಪಿ ಒಬ್ಬರನ್ನು ಅವರ ಪತ್ನಿ ಹಾಗೂ ಮಗಳು ಕೊಂದಿರುವ ಘಟನೆ ಕಳೆದ ವಾರ ಬೆಂಗಳೂರಿನಲ್ಲಿ ವರದಿಯಾಗಿದೆ.

ಬರ್ಬರ ಹಿಂಸೆ ಮತ್ತು ಕ್ರೌರ್ಯದ ಮೇಲಿನ ಘಟನೆಗಳು ಕೆಲವು ಉದಾಹರಣೆಗಳಷ್ಟೇ. ದೇಶದ ಒಂದಲ್ಲಾ ಒಂದು ಭಾಗದಲ್ಲಿ ಪ್ರತಿನಿತ್ಯವೂ ವರದಿಯಾಗುವ ಇಂಥ ಘಟನೆಗಳನ್ನು ಗಮನಿಸಿದರೆ, ನಾಗರಿಕ ಜಗತ್ತು ಹಿಮ್ಮುಖವಾಗಿ ಚಲಿಸುತ್ತಿದೆಯೇನೊ ಎನ್ನಿಸುತ್ತದೆ. ಮನುಷ್ಯ ನಾಗರಿಕತೆಯಸೌಧ ನಿಂತಿರುವುದೇ ಪ್ರೀತಿ, ಮಮತೆ, ಸ್ನೇಹ ಸಂಬಂಧಗಳ ಮೇಲೆ. ವರ್ತಮಾನದ ಹಿಂಸಾತ್ಮಕ ವಿದ್ಯಮಾನಗಳನ್ನು ಗಮನಿಸಿದರೆ ಮನುಷ್ಯತ್ವದ ಸೌಧವೇ ಕುಸಿಯುತ್ತಿದೆಯೇನೋ ಎನ್ನುವ ಅನುಮಾನ ಉಂಟಾಗುವಂತಿದೆ.

ನಾಗರಿಕ ಜಗತ್ತಿಗೆ ಹಿಂಸೆ–ಕ್ರೌರ್ಯ ಹೊಸತೇನೂ ಅಲ್ಲ. ಇತಿಹಾಸ ಚಕ್ರದ ಪಯಣ ರಕ್ತ–ಮಾಂಸಗಳ ಹಾದಿಯಲ್ಲೇ ಪಯಣಿಸಿದೆ. ಸರ್ವಾಧಿಕಾರದ ಹಂಬಲ ಹೆಚ್ಚಿದಾಗಲೆಲ್ಲ



ಯುದ್ಧಗಳು ಸಂಭವಿಸಿವೆ. ಯುದ್ಧಗಳೆಂದರೆ ಹಿಂಸೆಯ ಪ್ರಯೋಗಶಾಲೆಗಳಷ್ಟೇ. ಹೆಣಗಳ ಬಣವೆಯ ಮೇಲೆ ಸಾಮ್ರಾಜ್ಯ ಸ್ಥಾಪಿಸುವುದನ್ನು ಇತಿಹಾಸ ಸಂಭ್ರಮಿಸಿಯೂ ಇದೆ. ಸದ್ಯದ ವ್ಯಾಪಾರಿ ಜಗತ್ತು ಕೂಡ ಯುದ್ಧಗಳನ್ನು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಜಾರಿಯಲ್ಲಿಟ್ಟೇ ಇದೆ. ಯುದ್ಧ ದೂರದಲ್ಲೆಲ್ಲೋ ನಡೆದರೂ, ಅದರ ಕಬಂಧ ಬಾಹುಗಳು ಜಗತ್ತನ್ನೆಲ್ಲ ಕಾಡುತ್ತಿರುತ್ತವೆ. ಆದರೆ, ಎಲ್ಲ ಯುದ್ಧಗಳಿಗೂ ಒಂದು ಮಿತಿಯಿದೆ. ಬಹುತೇಕ ಸಂದರ್ಭಗಳಲ್ಲಿ ಯುದ್ಧದ ನೇರ ಪರಿಣಾಮದಿಂದ ನಾವು ದೂರವುಳಿದಿರುತ್ತೇವೆ.

ದೇಶಗಳ ನಡುವೆ ಮಾತ್ರವಲ್ಲ, ಮನೆತನಗಳ ನಡುವೆ, ಊರು ಮತ್ತು ಕೇರಿಯ ನಡುವೆ, ವ್ಯಕ್ತಿ ವ್ಯಕ್ತಿಯ ನಡುವೆಯೂ ನಡೆಯುವುದಿದೆ. ಆಗ ಕೂಡ ಅಪರಾಧಕೃತ್ಯಗಳು, ಹಿಂಸೆ ಸಂಭವಿಸುವುದಿದೆ. ಈ ಸಂಘರ್ಷಗಳಿಗೂ ಒಂದು ಮಿತಿಯಿದೆ. ಆದರೆ, ಈ ಹೊತ್ತಿನ ಹಿಂಸೆ ನಮ್ಮ ಸುತ್ತಮುತ್ತಲೇ ಘಟಿಸುತ್ತಿರುವಂತಹದ್ದು. ದೂರದಲ್ಲೆಲ್ಲೋ ನಡೆದ ಕ್ರೌರ್ಯದ ಘಟನೆಯನ್ನು ತಿಳಿದು ತಲ್ಲಣಗೊಳ್ಳುತ್ತಿದ್ದ ದಿನಗಳು ಈಗಿಲ್ಲ. ಸಹೃದಯರ ಎದೆಯೊಡೆಯುವಷ್ಟು ಭಯಾನಕವಾದ ಕೃತ್ಯಗಳು ನಮ್ಮ ಹಿತ್ತಲಲ್ಲೋ ನೆರೆಹೊರೆಯಲ್ಲೋ ಸಂಭವಿಸುತ್ತಿವೆ. ಈ ಘಟನೆಗಳ ನಡುವೆ ಸಾಮ್ಯತೆಯೊಂದಿದೆ. ಅದು, ಪರಸ್ಪರ ಇಷ್ಟಪಾತ್ರರ ನಡುವೆಯೇ ಹಿಂಸೆ–ಕ್ರೌರ್ಯದ ಕೃತ್ಯಗಳು ಘಟಿಸಿವೆ. ಪ್ರೇಮಿ ತನ್ನ ಸಂಗಾತಿಯನ್ನು ಕೊಲ್ಲುವುದು, ಹೆತ್ತವರು ಮಕ್ಕಳನ್ನು ಮಕ್ಕಳು ಹೆತ್ತವರನ್ನು ಕೊನೆಗೊಳಿಸುವುದು, ಹೆಂಡತಿ ಗಂಡನನ್ನು ಗಂಡ ಹೆಂಡತಿಯನ್ನು ಅಂತ್ಯಕಾಣಿಸುವುದು – ಇಂಥ ಘಟನೆಗಳು ಬೆಳಕಿಗೆ ಬಂದಾಗಲೆಲ್ಲ ನಮ್ಮ ನಾಗರಿಕ ಜಗತ್ತು ಮಾನವೀಯ ಆರ್ದ್ರತೆಯನ್ನೆಲ್ಲ ಕಳೆದುಕೊಂಡು ಬರಿದಾದಂತೆ ಭಾಸವಾಗುತ್ತದೆ.

## ಮಹಿಳೆಯರೇ ಹೆಚ್ಚಿನ ಮಿಕಗಳು!

ಹಿಂಸೆ–ಕ್ರೌರ್ಯಕ್ಕೆ ತುತ್ತಾಗಿರುವವರು ಬಹುತೇಕ